# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1098 |
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು | ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | ದಿನಾಂಕ: 25.07.2024 |
| ಉತ್ತರಿಸಬೇಕಾದ ಸಚಿವರು | ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯ ಸರ್ಕಾರ ಕೇಂದ್ರ ಜಾರಿಗೊಳಿಸಿರುವ ಹೊಸ ಮೂರು ಕ್ರಿಮಿನಲ್ ಅಪರಾಧ ಕಾನೂನುಗಳನ್ನು ಜಾರಿಗೊಳಿಸಲು ಕೈಗೊಂಡಿರುವ ಕ್ರಮಗಳು ಯಾವುವು; (ಪೂರ್ಣ ಮಾಹಿತಿ ನೀಡುವುದು) | ಮಾನ್ಯ ಕೇಂದ್ರ ಗೃಹ ಮತ್ತು ಸಹಕಾರ ಸಚಿವರ ಪತ್ರ ಸಂಖ್ಯೆ. 01/02/2023-Judl. Cell-1, ದಿನಾಂಕ: 22.08.2023ರಲ್ಲಿ ಭಾರತೀಯ ನ್ಯಾಯ ಸಂಹಿತೆ, 2023; ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ, 2023 ಮತ್ತು ಭಾರತೀಯ ಸಾಕ್ಷ್ಯ ವಿಧೇಯಕ, 2023ಗಳನ್ನು ಅನುಷ್ಠಾನಗೊಳಿಸಲು ಸಲಹೆಗಳನ್ನು ನೀಡುವಂತೆ ಮಾನ್ಯ ಮುಖ್ಯಮಂತ್ರಿಯವರನ್ನು ಕೋರಿದ್ದು, ಈ ಸಂಬಂಧವಾಗಿ ಮಾನ್ಯ ಮುಖ್ಯಮಂತ್ರಿಯವರು ನಡವಳಿ ಸಂಖ್ಯೆ. ACSCM/T/132/2023, ದಿನಾಂಕ: 05.09.2023ರಲ್ಲಿ ಸದರಿ ಮೂರು ಬಿಲ್ಲುಗಳನ್ನು ಪರಿಶೀಲಿಸಲು ಮಾನ್ಯ ಕಾನೂನು ಸಚಿವರ ಅಧ್ಯಕ್ಷತೆಯಲ್ಲಿ ಒಂದು Expert Committeeಯನ್ನು ರಚಿಸಲು ಸೂಚಿಸಿರುತ್ತಾರೆ.<br><br>ಅದರಂತೆ ಮಾನ್ಯ ಕಾನೂನು ಸಚಿವರು ಟಿಪ್ಪಣಿ ಸಂಖ್ಯೆ. ಕಾಸಂವ್ಯಪ್ರುಸ/1538/2023, ದಿನಾಂಕ: 13.09.2023ರಲ್ಲಿ ಹೊಸದಾಗಿ ಜಾರಿಗೆ ತರುತ್ತಿರುವ ಕಾಯ್ದೆಗಳಿಗೆ ಸಂಬಂಧಿಸಿದಂತೆ ಪರಾಮರ್ಶಿಸಿ, ಸಲಹೆ, ಸೂಚನೆಗಳನ್ನು ನೀಡಲು 10 ಸದಸ್ಯರುಗಳನ್ನೊಳಗೊಂಡ ವಿಷಯ ತಜ್ಞರ ಸಮಿತಿಯನ್ನು ರಚಿಸಲು ಸೂಚಿಸಿದ್ದು, ಈ ಸಂಬಂಧವಾಗಿ ಆದೇಶ ಸಂಖ್ಯೆ. ಲಾ-ಎಲ್ ಎಡಿ/379/2023, ದಿನಾಂಕ: 15.09.2023ರಲ್ಲಿ 11 ಜನ ಸದಸ್ಯರುಗಳನ್ನೊಳಗೊಂಡ ತಜ್ಞರ ಸಮಿತಿಯನ್ನು ರಚಿಸಲಾಗಿದ್ದು, ಸದರಿ ಆದೇಶದ ಪ್ರತಿಯನ್ನು **ಅನುಬಂಧ-1**ರಲ್ಲಿರಿಸಿದೆ. |

| | | |
|---|---|---|
| | | ಹೊಸ ಮೂರು ಕ್ರಿಮಿನಲ್ ಕಾನೂನುಗಳನ್ನು ಜಾರಿಗೊಳಿಸಲು ಎಲ್ಲಾ ಪೊಲೀಸ್ ಠಾಣೆಗಳಿಗೆ ಸೂಕ್ತ ನಿರ್ದೇಶನವನ್ನು ನೀಡಲಾಗಿದೆ. ಎಲ್ಲಾ ಪೊಲೀಸ್ ಅಧಿಕಾರಿಗಳಿಗೆ ಸಂಬಂಧಪಟ್ಟ ಪೊಲೀಸ್ ಅಕಾಡೆಮಿಯಿಂದ ಈ ಕಾನೂನುಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಸೂಕ್ತ ತರಬೇತಿಯನ್ನು ನೀಡಲಾಗಿದೆ ಹಾಗೂ ಹೊಸ ಕಾನೂನುಗಳನ್ನು ಕೈಪಿಡಿ ಮಾದರಿಯಲ್ಲಿ ಕನ್ನಡದಲ್ಲಿ ಭಾಷಾಂತರಿಸಿ ಒದಗಿಸಲಾಗಿದೆ. ಕರ್ನಾಟಕ ರಾಜ್ಯದ ಎಲ್ಲಾ ನ್ಯಾಯಾಧೀಶರಿಗೆ ಮತ್ತು ಅಭಿಯೋಜಕರಿಗೆ ಕರ್ನಾಟಕ ನ್ಯಾಯಾಂಗ ಅಕಾಡೆಮಿ ವತಿಯಿಂದ ಮೂರು ದಿನಗಳ ಸೂಕ್ತ ತರಬೇತಿಯನ್ನು ನೀಡಿ ಅವರನ್ನು ಹೊಸ ಕಾನೂನುಗಳ ಅನುಷ್ಠಾನಕ್ಕೆ ಸನ್ನದ್ಧರನ್ನಾಗಿ ಮಾಡಲಾಗಿದೆ. |
| (ಆ) | ರಾಜ್ಯದಲ್ಲಿ ಈ ಮೂರು ಕಾನೂನುಗಳನ್ನು ಜಾರಿಗೊಳಿಸಲು ರಾಜ್ಯ ಸರ್ಕಾರ ವಿರೋಧ ವ್ಯಕ್ತಪಡಿಸಿ ಈ ಕಾನೂನುಗಳಿಗೆ ಅಗತ್ಯ ತಿದ್ದುಪಡಿ ತರುವುದಾಗಿ ಯೋಚಿಸುತ್ತಿರುವುದು ನಿಜವೇ? | ಹೌದು |
| (ಇ) | ಹಾಗಿದ್ದಲ್ಲಿ, ಈ ಹೊಸ ಕಾನೂನುಗಳನ್ನು ಯಾವ ಸೆಕ್ಷನ್‌ಗಳಿಗೆ ತಿದ್ದುಪಡಿ ಮಾಡಲು ರಾಜ್ಯ ಸರ್ಕಾರಗಳಿಗೆ ಅವಕಾಶ ನೀಡಲಾಗಿದೆ; (ಪೂರ್ಣ ಮಾಹಿತಿ ನೀಡುವುದು) | ಭಾರತ ಸಂವಿಧಾನದ 7ನೇ ಅನುಸೂಚಿಯ 3ನೇ ಪಟ್ಟಿಯ 1 ಮತ್ತು 2ನೇ ನಮೂದನೆ ಅಡಿಯಲ್ಲಿ ಸದರಿ ಕಾನೂನುಗಳಿಗೆ ತಿದ್ದುಪಡಿ ತರುವ ಅಧಿಕಾರ ಹಾಗೂ ಅವಕಾಶ ರಾಜ್ಯ ವಿಧಾನ ಮಂಡಲಕ್ಕೆ ಇದೆ. ಯಾವ ಯಾವ ಸೆಕ್ಷನ್‌ಗಳಿಗೆ ತಿದ್ದುಪಡಿ ಅಗತ್ಯ ಇದೆ ಎಂಬ ಬಗ್ಗೆ ಪರಿಶೀಲಿಸಲಾಗುತ್ತಿದ್ದು, ತಜ್ಞರ ಅಭಿಪ್ರಾಯದಂತೆ ತಿದ್ದುಪಡಿ ವಿಧೇಯಕವನ್ನು ಸಿದ್ಧಪಡಿಸಿದ ನಂತರ ಈ ಪ್ರಸ್ತಾವನೆಯನ್ನು ಸದನದ ಮುಂದೆ ಮಂಡಿಸಲಾಗುವುದು. |
| (ಈ) | ಒಂದು ವೇಳೆ ಈ ರೀತಿ ತಿದ್ದುಪಡಿ ತರುವುದಕ್ಕಿಂತ, ಕೇಂದ್ರ ಸರ್ಕಾರದೊಂದಿಗೆ ವ್ಯವಹರಿಸಿ ವಾಸ್ತವವಾದ ಎಡರು-ತೊಡರುಗಳನ್ನು ವಿವರಿಸಿ, ಕೇಂದ್ರ ಸರ್ಕಾರ ತಿದ್ದುಪಡಿ ತರುವಂತೆ ಒತ್ತಾಯಿಸುವುದು ಸೂಕ್ತವಲ್ಲವೇ? | ಹೌದು<br><br>ಈ ಕುರಿತು ಮಾನ್ಯ ಮುಖ್ಯಮಂತ್ರಿಯವರು ಪತ್ರ ಸಂಖ್ಯೆ. CM/PS/6721965/2023, ದಿನಾಂಕ: 26.10.2023ರಲ್ಲಿ ಮಾನ್ಯ ಕೇಂದ್ರ ಗೃಹ ಮತ್ತು ಸಹಕಾರ ಸಚಿವರಿಗೆ ಪತ್ರ ಬರೆದಿರುತ್ತಾರೆ. |

**ಸಂಖ್ಯೆ: ಲಾ-ಎಲ್‌ಎಡಿ/377/2024**

**(ಎಚ್.ಕೆ. ಪಾಟೀಲ್)**
ಕಾನೂನು, ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಭಾರತೀಯ ನ್ಯಾಯ ಸಂಹಿತೆ, 2023; ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ, 2023 ಮತ್ತು ಭಾರತೀಯ ಸಾಕ್ಷ್ಯ ವಿಧೇಯಕ, 2023ಗಳನ್ನು ಸಮಗ್ರವಾಗಿ ಪರಾಮರ್ಶಿಸಿ ಸೂಕ್ತ ಶಿಫಾರಸ್ಸುಗಳನ್ನು ಮಾಡಲು ತಜ್ಞರ ಸಮಿತಿಯನ್ನು ರಚಿಸುವ ಕುರಿತು.

**ಓದಲಾಗಿದೆ:**
1. ಮಾನ್ಯ ಕೇಂದ್ರ ಗೃಹ ಮತ್ತು ಸಹಕಾರ ಸಚಿವರ ಪತ್ರ ಸಂಖ್ಯೆ. F.No. 01/02/2023-Judl.Cell-1, ದಿನಾಂಕ: 22.08.2023.
2. ಮಾನ್ಯ ಮುಖ್ಯಮಂತ್ರಿಯವರ ನಡವಳಿ ಸಂಖ್ಯೆ. ACSCM/T/132/2023, ದಿನಾಂಕ: 05.09.2023.
3. ಮಾನ್ಯ ಕಾನೂನು ಸಚಿವರ ಟಿಪ್ಪಣಿ ಸಂಖ್ಯೆ. ಕಾಸಂವ್ಯಪ್ರುಸ/153/2023, ದಿನಾಂಕ: 13.09.2023.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರ.ಸಂ. 1ರ ದಿನಾಂಕ: 22.08.2023ರ ಪತ್ರದಲ್ಲಿ ಮಾನ್ಯ ಕೇಂದ್ರ ಗೃಹ ಮತ್ತು ಸಹಕಾರ ಸಚಿವರು ದಿನಾಂಕ: 11.08.2023ರಂದು ಲೋಕಸಭೆಯಲ್ಲಿ ಭಾರತೀಯ ದಂಡ ಸಂಹಿತೆ, 1860ನ್ನು ನಿರಶನಗೊಳಿಸಿ ಭಾರತೀಯ ನ್ಯಾಯ ಸಂಹಿತೆ, 2023 ಮತ್ತು Code of Criminal Procedure, 1973ನ್ನು ನಿರಶನಗೊಳಿಸಿ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ, 2023 ಹಾಗೂ Indian Evidence Act, 1872ನ್ನು ನಿರಶನಗೊಳಿಸಿ ಭಾರತೀಯ ಸಾಕ್ಷ್ಯ ವಿಧೇಯಕ, 2023ನ್ನು ಪರಿಚಯಿಸಿದ್ದು, ಈ ಸಂಬಂಧವಾಗಿ ರಾಜ್ಯದ ಸಲಹೆ ಸೂಚನೆಗಳ ಬಗ್ಗೆ ವರದಿ ನೀಡುವಂತೆ ಮಾನ್ಯ ಮುಖ್ಯಮಂತ್ರಿಯವರನ್ನು ಕೋರಿರುತ್ತಾರೆ.

ಮೇಲೆ ಓದಲಾದ ಕ್ರ.ಸಂ. 2ರ ದಿನಾಂಕ: 05.09.2023ರ ನಡವಳಿಯಲ್ಲಿ ಮಾನ್ಯ ಮುಖ್ಯಮಂತ್ರಿಯವರು ಕೇಂದ್ರ ಸರ್ಕಾರವು ಮೂರು ಹೊಸ ವಿಧೇಯಕಗಳನ್ನು ಪರಿಚಯಿಸಿದ್ದು, ಸದರಿ ವಿಧೇಯಕಗಳ ಬದಲಾವಣೆಗಳ ಅವಶ್ಯಕತೆ ಇದ್ದಲ್ಲಿ ರಾಜ್ಯದ ಅವಶ್ಯಕ ಸಲಹೆ / ಸೂಚನೆಗಳನ್ನು ನೀಡುವಂತೆ ಕೋರಿದ್ದು, ಈ ವಿಷಯವಾಗಿ ಒಂದು Expert Committeeಯನ್ನು **ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರ ಅಧ್ಯಕ್ಷತೆಯಲ್ಲಿ** ರಚಿಸಿ ಈ ಸಂಬಂಧ ಎಲ್ಲಾ Acts and Rulesಗಳನ್ನು ಪರಿಶೀಲಿಸಿ ಒಂದು ತಿಂಗಳೊಳಗಾಗಿ ವರದಿ ನೀಡುವಂತೆ ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪ್ರವಾಸೋದ್ಯಮ ಸಚಿವರಿಗೆ ಸೂಚಿಸಿರುತ್ತಾರೆ.

ಮೇಲೆ ಓದಲಾದ ಕ್ರ.ಸಂ. 3ರ ದಿನಾಂಕ: 13.09.2023ರ ಟಿಪ್ಪಣಿಯಲ್ಲಿ ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಹೊಸದಾಗಿ ಜಾರಿಗೆ ತರುತ್ತಿರುವ ಹೊಸ ಕಾಯ್ದೆಗಳಿಗೆ ಸಂಬಂಧಿಸಿದ ಕಾಯ್ದೆ, ಕಾನೂನುಗಳನ್ನು ಪರಾಮರ್ಶಿಸಿ, ಸಲಹೆ, ಸೂಚನೆಗಳ ವರದಿಯನ್ನು ಸಿದ್ಧಪಡಿಸಿ ವರದಿ ಸಲ್ಲಿಸಲು ಈ ಕೆಳಕಂಡ ವಿಷಯ ತಜ್ಞರುಗಳನ್ನೊಳಗೊಂಡ ಸಮಿತಿಯನ್ನು ರಚಿಸುವಂತೆ ಸೂಚಿಸಿರುತ್ತಾರೆ.

| ಕ್ರ.ಸಂ. | ವಿಷಯ ತಜ್ಞರ ಹೆಸರು | ಪದನಾಮ |
|---|---|---|
| 1 | ನ್ಯಾಯಮೂರ್ತಿ ಶ್ರೀ ಪಿ.ಎನ್. ದೇಸಾಯಿ | ನಿವೃತ್ತ ನ್ಯಾಯಮೂರ್ತಿಗಳು, ಕರ್ನಾಟಕ ಉಚ್ಚ ನ್ಯಾಯಾಲಯ |
| 2 | ಶ್ರೀಮತಿ ಪ್ರಭಾವತಿ ಎಂ. ಹಿರೇಮಠ | ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ |
| 3 | ಶ್ರೀ ಶ್ರೀಧರ್ .ಜಿ | ಸರ್ಕಾರದ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ |
| 4 | ಶ್ರೀ ಹೆಚ್.ಕೆ. ಜಗದೀಶ್ | ಸರ್ಕಾರದ ವಿಶೇಷ ಕಾರ್ಯದರ್ಶಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ ಹಾಗೂ ನಿರ್ದೇಶಕರು, ಅಭಿಯೋಜನಾ ಇಲಾಖೆ |
| 5 | ಶ್ರೀಮತಿ ಶೈಲಾ ಬಿ.ಎಂ | ಸರ್ಕಾರದ ಅಪರ ಕಾರ್ಯದರ್ಶಿ-1, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ |
| 6 | ಶ್ರೀ ಚಿದಾನಂದ ಪಾಟೀಲ | ನಿವೃತ್ತ ಪ್ರಾಧ್ಯಾಪಕರು |
| 7 | ಶ್ರೀ ಶಶಿಕಾಂತ ಕರೋಶಿ | ವಕೀಲರು |
| 8 | ಶ್ರೀ ಎನ್.ಎಸ್. ಮೇಘರಿಕ್ | ಪೊಲೀಸ್ ಮಹಾನಿರ್ದೇಶಕರು (ನಿವೃತ್ತ) |
| 9 | ಪ್ರೊ. ಜೋಗಾರಾವ್ | ಪ್ರಾಧ್ಯಾಪಕರು, ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ (NLSIU) |
| 10 | ಶ್ರೀ ಮೊಹಮ್ಮದ್ ಇಸ್ಮಾಯಿಲ್ | ಸರ್ಕಾರದ ಅಪರ ಕಾರ್ಯದರ್ಶಿ (ನಿವೃತ್ತ), ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ |

ಪ್ರಸ್ತಾವನೆಯನ್ನು ಪರಿಶೀಲಿಸಿರುವ ಸರ್ಕಾರ ಈ ಕೆಳಕಂಡಂತೆ ಆದೇಶಿಸಿದೆ

**ಸರ್ಕಾರದ ಆದೇಶ ಸಂಖ್ಯೆ ಲಾ-ಎಲ್‌ಎಡಿ/379/2023,**
**ಬೆಂಗಳೂರು, ದಿನಾಂಕ: 15.09.2023**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಭಾರತೀಯ ನ್ಯಾಯ ಸಂಹಿತೆ, 2023; ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ, 2023 ಮತ್ತು ಭಾರತೀಯ ಸಾಕ್ಷ್ಯ ವಿಧೇಯಕ, 2023ಗಳನ್ನು ಸಮಗ್ರವಾಗಿ ಪರಾಮರ್ಶಿಸಿ ಸೂಕ್ತ ಶಿಫಾರಸ್ಸುಗಳನ್ನು ಮಾಡಲು ಈ ಕೆಳಕಂಡ ತಜ್ಞರುಗಳನ್ನೊಳಗೊಂಡ ಸಮಿತಿಯನ್ನು (Expert Committee) **ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರ** ಅಧ್ಯಕ್ಷತೆಯಲ್ಲಿ ರಚಿಸಲಾಗಿದೆ.

| ಕ್ರ.ಸಂ. | ವಿಷಯ ತಜ್ಞರ ಹೆಸರು | ಪದನಾಮ |
|---|---|---|
| 1 | **ಶ್ರೀ ಹೆಚ್.ಕೆ. ಪಾಟೀಲ್**<br>ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು | ಅಧ್ಯಕ್ಷರು |
| 2 | **ನ್ಯಾಯಮೂರ್ತಿ ಶ್ರೀ ಪಿ.ಎನ್. ದೇಸಾಯಿ**<br>ನಿವೃತ್ತ ನ್ಯಾಯಮೂರ್ತಿಗಳು,<br>ಕರ್ನಾಟಕ ಉಚ್ಚ ನ್ಯಾಯಾಲಯ | ಸದಸ್ಯರು |
| 3 | **ಶ್ರೀಮತಿ ಪ್ರಭಾವತಿ ಎಂ. ಹಿರೇಮಠ**<br>ಸರ್ಕಾರದ ಪ್ರಧಾನ ಕಾರ್ಯದರ್ಶಿ,<br>ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ | ಸದಸ್ಯರು |
| 4 | **ಶ್ರೀ ಶ್ರೀಧರ್ .ಜಿ**<br>ಸರ್ಕಾರದ ಕಾರ್ಯದರ್ಶಿ,<br>ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ | ಸದಸ್ಯರು |
| 5 | **ಶ್ರೀ ಹೆಚ್.ಕೆ. ಜಗದೀಶ್**<br>ಸರ್ಕಾರದ ವಿಶೇಷ ಕಾರ್ಯದರ್ಶಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ ಹಾಗೂ<br>ನಿರ್ದೇಶಕರು, ಅಭಿಯೋಜನಾ ಇಲಾಖೆ | ಸದಸ್ಯರು |
| 6 | **ಶ್ರೀಮತಿ ಶೈಲಾ ಬಿ.ಎಂ**<br>ಸರ್ಕಾರದ ಅಪರ ಕಾರ್ಯದರ್ಶಿ-1,<br>ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ | ತಜ್ಞರ ಸಮಿತಿಯ ಸದಸ್ಯ ಕಾರ್ಯದರ್ಶಿ |
| 7 | **ಶ್ರೀ ಚಿದಾನಂದ ಪಾಟೀಲ**<br>ನಿವೃತ್ತ ಪ್ರಾಧ್ಯಾಪಕರು | ಸದಸ್ಯರು |
| 8 | **ಶ್ರೀ ಶಶಿಕಾಂತ ಕರೋಶಿ**<br>ವಕೀಲರು | ಸದಸ್ಯರು |
| 9 | **ಶ್ರೀ ಎನ್.ಎಸ್. ಮೇಘರಿಕ್**<br>ಪೊಲೀಸ್ ಮಹಾನಿರ್ದೇಶಕರು (ನಿವೃತ್ತ) | ಸದಸ್ಯರು |
| 10 | **ಪ್ರೊ. ಎಸ್.ವಿ. ಜೋಗಾರಾವ್**<br>ಪ್ರಾಧ್ಯಾಪಕರು, ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ (NLSIU) | ಸದಸ್ಯರು |
| 11 | **ಶ್ರೀ ಮೊಹಮ್ಮದ್ ಇಸ್ಮಾಯಿಲ್**<br>ಸರ್ಕಾರದ ಅಪರ ಕಾರ್ಯದರ್ಶಿ (ನಿವೃತ್ತ), ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ | ಸದಸ್ಯರು |

ಮೇಲ್ಕಂಡ ತಜ್ಞರ ಸಮಿತಿಯು ಸಂಬಂಧಿಸಿದ ಕಾಯ್ದೆ ಮತ್ತು ನಿಯಮಗಳನ್ನು ಪರಾಮರ್ಶಿಸಿ ರಾಜ್ಯದ ಸಲಹೆ ಸೂಚನೆಗಳ ಬಗ್ಗೆ ಇಪ್ಪತ್ತು ದಿನಗಳೊಳಗಾಗಿ ವರದಿ ನೀಡುವಂತೆ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

P.M. 15/9

**(ಪ್ರಭಾವತಿ ಎಂ. ಹಿರೇಮಠ)**
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಕಾನೂನು, ನ್ಯಾಯ ಮತ್ತು
ಮಾನವ ಹಕ್ಕುಗಳ ಇಲಾಖೆ

15/09/23

**<u>ಇವರಿಗೆ:</u>**

1. ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು.
2. ನ್ಯಾಯಮೂರ್ತಿ ಶ್ರೀ ಪಿ.ಎನ್. ದೇಸಾಯಿ, ನಿವೃತ್ತ ನ್ಯಾಯಮೂರ್ತಿಗಳು, ಕರ್ನಾಟಕ ಉಚ್ಚ ನ್ಯಾಯಾಲಯ, ನಂ.230, 5ನೇ ಕ್ರಾಸ್, ಆರ್.ಎಂ.ವಿ. 2ನೇ ಹಂತ, ರಾಜಮಹಲ್ ವಿಲಾಸ್ ಎಕ್ಸ್‌ಟೆನ್ಶನ್, ಬೆಂಗಳೂರು-560094.
3. ಶ್ರೀಮತಿ ಪ್ರಭಾವತಿ ಎಂ. ಹಿರೇಮಠ, ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ.
4. ಶ್ರೀ ಶ್ರೀಧರ್ .ಜಿ, ಸರ್ಕಾರದ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.
5. ಶ್ರೀ ಹೆಚ್.ಕೆ. ಜಗದೀಶ್, ಸರ್ಕಾರದ ವಿಶೇಷ ಕಾರ್ಯದರ್ಶಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ ಹಾಗೂ ನಿರ್ದೇಶಕರು, ಅಭಿಯೋಜನಾ ಇಲಾಖೆ.
6. ಶ್ರೀಮತಿ ಶೈಲಾ ಬಿ.ಎಂ, ಸರ್ಕಾರದ ಕಾನೂನು ಕಾರ್ಯದರ್ಶಿ-1, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ.
7. ಶ್ರೀ ಚಿದಾನಂದ ಪಾಟೀಲ, ನಿವೃತ್ತ ಪ್ರಾಧ್ಯಾಪಕರು, ವನಸಿರಿ, ಮಾರುತಿ ದೇವಸ್ಥಾನದ ಹತ್ತಿರ, ಬಾರಾಕೋಟ್ರಿ ರಸ್ತೆ, ಧಾರವಾಡ-580007 (ಮೊಬೈಲ್: 9845431663).
8. ಶ್ರೀ ಶಶಿಕಾಂತ ಕರೋಶಿ, ವಕೀಲರು, ಆದರ್ಶನಗರ, ಹುಕ್ಕೇರಿ, ಬೆಳಗಾವಿ ಜಿಲ್ಲೆ-591309 (ಮೊಬೈಲ್: 9632972500).
9. ಶ್ರೀ ಎನ್.ಎಸ್. ಮೇಘರಿಕ್, ಪೊಲೀಸ್ ಮಹಾನಿರ್ದೇಶಕರು (ನಿವೃತ್ತ), ಸದಸ್ಯರು, ಬಿ.ಡಿ.ಎ. ಅರ್ಕಾವತಿ ಬಡಾವಣೆಯ ಹೈಕೋರ್ಟ್ ಸಮಿತಿ, 4ನೇ ಮಹಡಿ, ಕೃಷಿ ಭವನ, ಹಡ್ಸನ್ ವೃತ್ತ, ಬೆಂಗಳೂರು (ಮೊಬೈಲ್: 9844044166).
10. ಪ್ರೊ. ಎಸ್.ವಿ. ಜೋಗಾರಾವ್, ನಿವೃತ್ತ ಪ್ರಾಧ್ಯಾಪಕರು, ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ (NLSIU), ಲೀಗಲ್ ಎಕ್ಸೆಲ್ ಅಟಾರ್ನಿಸ್, ಲಕ್ಷ್ಮೀವರಂ, ಶ್ರೀ ಭಗವತಿ ವೆಕ್ಕಲಿಯಮ್ಮ ದೇವಸ್ಥಾನದ ಬೀದಿ, ಸರ್ ಎಂ.ವಿ. ಲೇಔಟ್, 6ನೇ ಬ್ಲಾಕ್, ಉಲ್ಲಾಳ್, ಬೆಂಗಳೂರು-560056 (ಮೊಬೈಲ್: 9342877099).
11. ಶ್ರೀ ಮೊಹಮ್ಮದ್ ಇಸ್ಮಾಯಿಲ್, ಸರ್ಕಾರದ ಅಪರ ಕಾರ್ಯದರ್ಶಿ (ನಿವೃತ್ತ), ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ, ನಂ. 31, 3ನೇ ಮಹಡಿ, ಗೋಲ್ಡ್ ಓಪನ್, ಮಿಲ್ಲರ್ಸ್ ರಸ್ತೆ, ಬೆಂಗಳೂರು-560046 (ಮೊಬೈಲ್: 9449070060).

**<u>ಪ್ರತಿ ಮಾಹಿತಿಗಾಗಿ</u>**:

1. ಮಾನ್ಯ ಮುಖ್ಯಮಂತ್ರಿಯವರ ಅಪರ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಉಪ ಕಾರ್ಯದರ್ಶಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ (ಆಡಳಿತ-2), ಇವರ ಆಪ್ತ ಸಹಾಯಕರು, ವಿಧಾನಸೌಧ, ಬೆಂಗಳೂರು.
5. ಶಾಖಾ ರಕ್ಷಾ, ಕಡತ/ಹೆಚ್ಚುವರಿ ಪ್ರತಿಗಳು.